ದಿನಾಂಕ : 19–02–2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಕಲಂ 223 ಬಿ.ಎನ್.ಎಸ್.ಎಸ್ ಅಡಿ ಸ್ವಪ್ರಮಾಣೀಕೃತ ಹೇಳಿಕೆ**

2. ಆಶ್ರಯ ಗೃಹ ನಿರ್ಮಾಣ ಸಂಘ ಸದಲಗಾ ಸರ್ವೇ ನಂಬರ 787/ಅ ಜಮೀನನ್ನು ಸದರಿ ಆಶ್ರಯ ಗೃಹ ನಿರ್ಮಾಣ ಸಂಘದ ಅಧ್ಯಕ್ಷರು, ಸಂಚಾಲಕರು ಮತ್ತು ಎಲ್ಲಾ ಸಂಘದ ಸದಸ್ಯರು ಸೇರಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರನ್ನು ಸದರಿ ಸಂಘದಲ್ಲಿ ಸದಸ್ಯರನ್ನಾಗಿ ಮಾಡಿಕೊಂಡಿರುವುದಿಲ್ಲ. 1987 ರಲ್ಲಿ ಸದರಿ ಸಂಘದ ಅಧ್ಯಕ್ಷರು, ಸಂಚಾಲಕರು ಮತ್ತು ಎಲ್ಲಾ ಸಂಘದ ಸದಸ್ಯರು ಸೇರಿ ಒಂದು ಠರಾವು ಮಾಡಿದ್ದು, ಸದರಿ ಠರಾವಿನಲ್ಲಿ 6 ಎಕರೆ ಜಮೀನಿನಲ್ಲಿ 100 ನಿವೇಶನಗಳನ್ನು ನಿರ್ಮಾಣ ಮಾಡಲು ನಿರ್ಧರಿಸಿದ್ದು ಅದರಲ್ಲಿ ಶೇಕಡ 50 ನಿವೇಶನಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರಿಗೆ ನೀಡಬೇಕೆಂದು ನಿರ್ಧರಿಸಿದ್ದು ಸದರಿ ಠರಾವಿಗೆ ಸಹಾಯಕ ಆಯುಕ್ತರು ಬೆಳಗಾವಿರವರ ಸಹಿ ಇದ್ದು ಆದರೆ ಸದರಿ ಠರಾವಿನಂತೆ ಶೇಕಡ 50 ರಷ್ಟು ನಿವೇಶನಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರಿಗೆ ಸದರಿ ಸಂಘದ ಅಧ್ಯಕ್ಷರು, ಸಂಚಾಲಕರು ಮತ್ತು ಸದಸ್ಯರು ನೀಡಿರುವುದಿಲ್ಲ.

3. ಸದಲಗಾ ಪುರಸಭೆಗೆ ನಾನು, ಈ ಪ್ರಕರಣದ ಪಿರ್ಯಾದಿ ಹಾಗೂ ಇನ್ನೊಬ್ಬ ಸಾಕ್ಷಿದಾರರಾದಂತಹ ಸಂತೋಷ ಕೆಬುಡಿ ಭೇಟಿ ಕೊಟ್ಟಿದ್ದು ಅಲ್ಲಿ ಈ ಪ್ರಕರಣದ ಪಿರ್ಯಾದಿಯವರು ಒಂದು ಠರಾವು ತೋರಿಸಿದ್ದು ಸದರಿ ಠರಾವನ್ನು ಪರಿಶೀಲಿಸಲಾಗಿ ಸದರಿ ಠರಾವನ್ನು ಆಶ್ರಯ ಗೃಹ ನಿರ್ಮಾಣ ಸಂಘ ಸದಲಗಾರವರು ಮತ್ತು ಪುರಸಭೆಯವರು ಸೇರಿ 2001 ರಲ್ಲಿ ಠರಾವನ್ನು ಮಾಡಿದ್ದು ಕಂಡುಬಂತು. ಸದರಿ ಠರಾವಿನ ಪ್ರಕಾರ ಶೇಕಡ 50 ರಷ್ಟು ನಿವೇಶನಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಮೀಸಲಿಡಬೇಕಾಗಿತ್ತು ಆದರೆ ಅವುಗಳ ಪೈಕಿ 14 ನಿವೇಶನಗಳನ್ನು ಆಶ್ರಯ ಗೃಹ ನಿರ್ಮಾಣ ಸಂಘದ ಅಧ್ಯಕ್ಷರು, ಸಂಚಾಲಕರು ಮತ್ತು ಸದಸ್ಯರ ಹೆಸರಿನಲ್ಲಿ ನೀಡಿದ್ದು ಕಂಡು ಬಂತು.

4. ಸದರಿ ಮಾಹಿತಿ ಗೊತ್ತಾದ ನಂತರ ಆಶ್ರಯ ಗೃಹ ನಿರ್ಮಾಣ ಸಂಘ ಸದಲಗಾದ ಅಧ್ಯಕ್ಷರಾದಂತಹ ದಾದಾ ಬಾಳಪ್ಪ ವಾಘ್ ರವರನ್ನು ನಾನು, ಪಿರ್ಯಾದಿದಾರರು ಹಾಗೂ ಇನ್ನೊಬ್ಬ ಸಾಕ್ಷಿದಾರರಾದಂತಹ ಸಂತೋಷ ಅಪ್ಪಾಸಾಬ ಕೆಬುಡೆ ರವರು ಸೇರಿ ಭೇಟಿ ಆಗಿ ಸರ್ಕಾರದಿಂದ 6 ಎಕರೆ ಜಮೀನು ಆಶ್ರಯ ಗೃಹ ನಿರ್ಮಾಣ ಸಂಘಕ್ಕೆ ನೀಡಿದ್ದು ಅದರಲ್ಲಿ 3 ಎಕರೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಿವೇಶನಗಳನ್ನು ಮೀಸಲಿಡಬೇಕಾಗಿತ್ತು ಆದರೆ ನಿಮ್ಮ ಸಂಘದವರು ಮೀಸಲಿಟ್ಟುರುವುದಿಲ್ಲ ಎಂದು ವಿಚಾರಿಸಿದ್ದು ಆಗ ಅವರು ನಮಗೆ ಅಂದಿದ್ದೇನೆಂದರೆ ನಾವು ಇಲ್ಲಿ ಚೋಲೋ ಚೋಲೋ ಮಂದಿ ಇರುತ್ತೇವೆ ನೀವು ಹೊಲೆಯರ ಮಾದರ ಇರುತ್ತೀರಿ ನಿಮಗೆ ಇಲ್ಲಿ ಕೊಡಲು ಬರುವುದಿಲ್ಲ ನೀವು ಎಲ್ಲಿಂದ ಬರುತ್ತೀರಿ ಬರೋಗ್ರಿ ಅಂತಾ ನಮಗೆ ಹೇಳಿದರು.

5. ನಂತರ ನಾವು ಅಲ್ಲಿಂದ ದೂರು ಕೊಡಲು ಸದಲಗಾ ಪೋಲಿಸ ಠಾಣೆಯ ಪಿ.ಎಸ್.ಐ ಹತ್ತಿರ ಹೋಗಿ ಮನೋಹರ ಸಂಗಪ್ಪ ಹೆಗ್ರೆ ರವರು ಲಿಖಿತ ರೂಪದಲ್ಲಿ ಪಿರ್ಯಾದಿಯನ್ನು ನೀಡಿದ್ದು ಅದನ್ನು ಪಡೆದುಕೊಂಡಿದ್ದು ಆದರೆ ಅದರ ಬಗ್ಗೆ ಸದರಿ ಪಿ.ಎಸ್.ಐ ರವರು ನಮಗೆ ಸ್ವೀಕೃತಿಯನ್ನು ನೀಡಲಿಲ್ಲ. ನೀವು ದೂರು ಕೊಟ್ಟದ್ದಿರಿ ಅದನ್ನು ಪರಿಶೀಲನೆ ಮಾಡಿ ಚೌಕಾಸಿ ಮಾಡಿ ನಿಮಗೆ ನ್ಯಾಯ ಕೊಡಿಸುತ್ತೇವೆ ಅಂತಾ ಹೇಳಿ ನಮ್ಮನ್ನು ಅಲ್ಲಿಂದ ಕಳುಹಿಸಿಕೊಟ್ಟರು. ಅದಾದ ಒಂದು ವಾರದ ತನಕ ನಾವು ನೀರಿಕ್ಷೆ ಮಾಡಿದ್ದು ಆದರೆ ಸದಲಗಾ ಪೋಲಿಸರು ನಮ್ಮನ್ನು ಕರೆಸಿ ವಿಚಾರಣೆ ಮಾಡಲಿಲ್ಲ, ಆದ ಕಾರಣ ನಮಗೆ ತಿಳಿದು ಬಂದಿದ್ದೇನೆಂದರೆ ಸದರಿ ಆಶ್ರಯ ಗೃಹ ನಿರ್ಮಾಣ ಸಂಘದವರ ಮಾತು ಕೇಳಿ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದು ನನಗೆ ತಿಳಿದುಬಂತು.

6. ತದನಂತರ ನಾವು ಮೂರು ಜನ ಸೇರಿ ಡಿ.ವೈ.ಎಸ್.ಪಿ ಚಿಕ್ಕೋಡಿರವರ ಕಛೇರಿಗೆ ಹೋಗಿದ್ದು ಅಲ್ಲಿ ಈ ಪ್ರಕರಣದ ಪಿರ್ಯಾದಿಯವರು ಲಿಖಿತವಾದ ಒಂದು ದೂರನ್ನು ನೀಡಿದ್ದು ಸದರಿ ದೂರಿಗೆ ಸ್ವೀಕೃತಿಯನ್ನು ಡಿ.ವೈ.ಎಸ್.ಪಿ ಚಿಕ್ಕೋಡಿರವರು ನೀಡಿ ನಿಮಗೆ ನ್ಯಾಯ ಒದಗಿಸಿಕೊಡುವುದಾಗಿ ಹೇಳಿ ನಮ್ಮನ್ನು ಅಲ್ಲಿಂದ ಕಳುಹಿಸಿಕೊಟ್ಟರು. ತದನಂತರ ಡಿ.ವೈ.ಎಸ್.ಪಿ ಚಿಕ್ಕೋಡಿರವರು ಯಾವುದೇ ಕಾನೂನು ಕ್ರಮ ಕೈಗೊಳ್ಳದಿದ್ದ ಕಾರಣ ಈ ಪ್ರಕರಣದ

ಪಿರ್ಯಾದಿದಾರರು ದೂರನ್ನು ಅಂಚೆ ಮುಖಾಂತರ ಎಸ್.ಪಿ. ಬೆಳಗಾವಿ ಹಾಗೂ ಜಿಲ್ಲಾಧಿಕಾರಿ ಬೆಳಗಾವಿ ಇವರಿಗೆ ಕಳುಹಿಸಿಕೊಟ್ಟರು.

7. ಎಸ್.ಪಿ. ಬೆಳಗಾವಿರವರಿಂದ ನಮಗೆ ಯಾವುದೇ ಉತ್ತರ ಬರಲಿಲ್ಲ ಮತ್ತು ಅವರೂ ಸಹ ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ ಆದ ಕಾರಣ ಈ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದಿಯನ್ನು ಪಿರ್ಯಾದಿದಾರರು ನೀಡಿರುತ್ತಾರೆ. ಮಾನ್ಯ ನ್ಯಾಯಾಲಯವು ಕಾನೂನಿನ ಅಡಿಯಲ್ಲಿ ಈ ಪ್ರಕರಣದಲ್ಲಿ ಆರೋಪಿತರೆಂದು ತೋರಿಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ನಮಗೆ ನ್ಯಾಯ ಒದಗಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.